# ನನ್ನ ಮೌನಕ್ಕೂ ಒಂದು ಕಾರಣವಿದೆ

ಈಚೆಗೆ, 'ಎಲ್ರ ಕಾಲೆಳೆಯುತ್ತೆ ಕಾಲ' ಸಿನಿಮಾದ ಹಾಡೊಂದರಲ್ಲಿ ರ‍್ಯಾಪರ್ ಚಂದನ್ ಶೆಟ್ಟಿ ಜೊತೆ ಹೆಜ್ಜೆ ಹಾಕಿರುವ ನಟಿ ರಾಗಿಣಿ ದ್ವಿವೇದಿ, ಸಾಲುಸಾಲು ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಮಲೆಯಾಳಂ, ತಮಿಳು ಹಾಗೂ ಕನ್ನಡದ ಎರಡು ಸಿನಿಮಾಗಳಲ್ಲಿ ನಟಿಸುತ್ತಿದ್ದು, 'ಬಿಂಗೊ' ಕನ್ನಡ ಸಿನಿಮಾ ಸೆಟ್ಟೇರುವ ತಯಾರಿಯಲ್ಲಿದೆ.

ಹಲವು ತೊಡಕುಗಳನ್ನು ನಿವಾರಿಸಿಕೊಂಡು ಸಿನಿಮಾರಂಗಕ್ಕೆ ತಾವು ಮತ್ತಷ್ಟು ದೃಢವಾಗಿ ಮರಳಿರುವುದಾಗಿ ಹೇಳಿಕೊಂಡಿರುವ ರಾಗಿಣಿ, ಬಂಗಾಳಿ ಸಿನಿಮಾಗೂ ಕಾಲಿಟ್ಟಿದ್ದಾರೆ. ಬಾಲಿವುಡ್ ಅವಕಾಶ ಅವರ ಕನಸಿನ ರೆಕ್ಕೆಗಳಿಗೆ ಇನ್ನಷ್ಟು ಬಲ ತುಂಬಿದೆಯಂತೆ.

ಸಿನಿಮಾರಂಗಕ್ಕೆ ಬಂದ 15 ವರ್ಷಗಳಲ್ಲಿ 40ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ರಾಗಿಣಿಗೆ ಸವಾಲಿನ ಸಮಯವಾಗಿದ್ದು, ಮಾದಕವ್ಯಸನ ಪ್ರಕರಣ ಸಂಬಂಧ ಪೊಲೀಸ್ ಕಸ್ಟಡಿಯಲ್ಲಿ ಕಳೆದ 90 ದಿನಗಳು. ಆನಂತರ ಸ್ವಲ್ಪ ದಿನ ಬ್ರೇಕ್ ತೆಗೆದುಕೊಂಡಿದ್ದ ಅವರು, ಇದೀಗ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಇದೇ ಸಂದರ್ಭ, ತಮ್ಮ ಹಿಂದಿನ ದಿನಗಳ ಕುರಿತು ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ.

'ಶಾಲಾ ದಿನಗಳಲ್ಲಿ ಕ್ರೀಡೆಯಲ್ಲಿ ಮುಂದಿದ್ದ ನನ್ನ ಬಳಿ ಮಾಡೆಲಿಂಗ್ ಅವಕಾಶ ಬಂದಿತ್ತು. ಎರಡು ಅಸೈನ್ಮೆಂಟ್ ನಂತರ ಕನ್ನಡ ಸಿನಿಮಾರಂಗದಲ್ಲಿ ಬಂದು ನಿಂತಿದ್ದೆ. ಭಾಷೆ, ಕೌಶಲ ಹಾಗೂ ಯಾವುದೇ ಸಿದ್ಧತೆ ಇಲ್ಲದೇ ಇಲ್ಲಿಗೆ ಬಂದಿದ್ದೆ' ಎನ್ನುವ ರಾಗಿಣಿ, ಕೆಲವೇ ದಿನಗಳಲ್ಲಿ ಸ್ಟಾರ್‌ಡಂ ದೊರೆತು ಎಂಟು ಭಾಷೆಗಳನ್ನು ಕಲಿತದ್ದನ್ನು ನೆನಪಿಸಿಕೊಂಡಿದ್ದಾರೆ.

'ನನಗೆ ಸಿನಿಮಾರಂಗದಲ್ಲಿ ಯಾರೂ ಗಾಡ್‌ಫಾದರ್ ಇಲ್ಲದ ಕಾರಣ ನನ್ನನ್ನು ನಾನು ರಕ್ಷಿಸಿಕೊಳ್ಳಬೇಕಿತ್ತು ಹಾಗೂ ಆ ಕಠಿಣ ಹಾದಿಯನ್ನು ನಾನು ಕರಗತ ಮಾಡಿಕೊಂಡೆ' ಎಂದಿದ್ದಾರೆ.

ಇದೇ ಸಂದರ್ಭ, ಜೀವನದಲ್ಲಿನ ನೆಗೆಟಿವಿಟಿ ಕುರಿತೂ ಮಾತು ಹಂಚಿಕೊಂಡಿದ್ದಾರೆ. 'ನಮಗೆ ಬೇಡದೇ ಇದ್ದರೂ ನೆಗೆಟಿವಿಟಿ ನಮ್ಮ ಸುತ್ತಲೂ ಇದ್ದೇ ಇರುತ್ತದೆ. ಉದಾಹರಣೆಗೆ, ನಾನು 'ಸೋಲೊ ಆ್ಯಕ್ಟಿಂಗ್' ಸಿನಿಮಾಗಳಲ್ಲಿ ನಟಿಸಲು ಆರಂಭಿಸಿದಾಗ ಕೆಲವರಿಗೆ ಅಭದ್ರತೆ ಕಾಡಲು ಶುರುವಾಯಿತು. ಪ್ರೋತ್ಸಾಹದ ಮಾತಿರಲಿ, ನೀವೇಕೆ ಮಹಿಳಾ ಪ್ರಧಾನ ಸಿನಿಮಾಗಳನ್ನು ಮಾಡುತ್ತಿದ್ದೀರಿ, ಹೀರೋಯಿನ್ ಅನ್ನು ಹೀರೊ ಆಗಿ ಯಾಕೆ ಮಾಡುತ್ತಿದ್ದೀರ? ಎಂದು ನನ್ನ ಸಿನಿಮಾ ನಿರ್ಮಾಪಕರಿಗೆ ಬೆದರಿಕೆ ಕರೆಗಳನ್ನು ಮಾಡುತ್ತಿದ್ದರು. ಆದರೆ ಈ ಸಂಗತಿಗಳು ನನ್ನನ್ನು ಇನ್ನಷ್ಟು ಪ್ರೇರೇಪಿಸಿದವು. ಇಂದು ನನ್ನ ಹಾದಿಯನ್ನೊಮ್ಮೆ ತಿರುಗಿ ನೋಡಿದರೆ, ನಾ ಕಂಡುಕೊಂಡದ್ದು ಒಂದೇ. ಪಾಸಿಟಿವ್ ಆಗಿರುವುದರ ಜೊತೆಗೆ ನಾವು ದೃಢವಾಗಿದ್ದರೆ ಯಾವುದಾದರೂ ಸಾಧ್ಯ ಎನ್ನುವುದು...' ನೆಗೆಟಿವಿಟಿ ತಮ್ಮನ್ನು ಕಾಡಿದ ಬಗೆಯನ್ನು ಹೀಗೆ ತೆರೆದಿಟ್ಟಿದ್ದಾರೆ.

ದಿನನಿತ್ಯದ ಜೀವನದಲ್ಲಿ ಮಹಿಳೆಯರು ಎದುರಿಸಬೇಕಾದ ಸವಾಲಿನ ಬಗ್ಗೆ ಮಾತನಾಡುತ್ತಾ, 'ತಲೆತಲೆಮಾರುಗಳಿಂದಲೂ ಮಹಿಳೆಯರು ತಮ್ಮನ್ನು ತಾವೇ ಕನಿಷ್ಠವಾಗಿಸಿಕೊಂಡು ಬಂದಿದ್ದಾರೆ. ಎಲ್ಲರನ್ನು ಹಾಗೂ ಎಲ್ಲವನ್ನು ಆದ್ಯತೆಯಾಗಿರಿಸಿ ತಮ್ಮನ್ನು ತಾವು ನಿರ್ಲಕ್ಷಿಸಿಕೊಳ್ಳುತ್ತಿದ್ದಾರೆ. ಆದರೆ ಮೊದಲು ನಮ್ಮನ್ನು ನಾವು ಪ್ರೀತಿಸಿಕೊಳ್ಳುವುದು ಮುಖ್ಯ. ಮಹಿಳೆಯರು ಒಗ್ಗಟ್ಟಾಗಿರಬೇಕು. ಇದು ಚಿತ್ರರಂಗಕ್ಕೂ ಅನ್ವಯಿಸುತ್ತದೆ' ಎಂದಿದ್ದಾರೆ.

ತಮ್ಮ ಹಿಂದಿನ ದಿನಗಳನ್ನು ಮೆಲುಕು ಹಾಕಿಕೊಂಡಿರುವ ಅವರು, 'ಪೊಲೀಸ್ ಕಸ್ಟಡಿಯಲ್ಲಿದ್ದಾಗ ನಾನು ನನ್ನ ಜೀವನದಲ್ಲಿ ಬಹುದೊಡ್ಡ ಪಾಠ ಕಲಿತೆ. ಆ 90 ದಿನಗಳಲ್ಲಿ ನಡೆದ ಪ್ರತಿ ಘಟನೆಯನ್ನೂ ನಾನು ಬರೆದಿದ್ದೇನೆ. ನನ್ನ ಪ್ರತಿ ಭಾವನೆಯೂ ಅದರಲ್ಲಿದೆ. ಅದೇ ನನಗೆ ಥೆರಪಿಯಂತಿತ್ತು. ಬಲು ಕ್ರೂರ ವಾಸ್ತವ ತೆರೆದಿಟ್ಟ ಆ ಬರಹಗಳನ್ನು ಪುಸ್ತಕವಾಗಿ ಮಾರ್ಪಾಡು ಮಾಡುತ್ತೇನೆ. ಕೆಲವು ವಿಷಯದ ಬಗ್ಗೆ ಕೆಲಕಾಲ ನಾನು ಮೌನವಾಗಿದ್ದೇನೆಂದರೆ, ಅದಕ್ಕೆ ಒಂದು ಕಾರಣವಿದೆ ಎಂದರ್ಥ. ಅದು ಸದ್ಯದಲ್ಲೇ ಹೊರಬರಲಿದೆ ಎಂದು ಮಾರ್ಮಿಕವಾಗಿ ಮಾತನಾಡಿದ್ದಾರೆ. ■

